ಕಮಲಾ ನಗರದ ಶಂಕರ್‌ನಾಗ್ ಬಸ್ ನಿಲ್ದಾಣದ ಬಗ್ಗೆ

433 (933) ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕಮಲಾನಗರದ ಶಂಕರ್‌ನಾಗ್ ಬಸ್ ನಿಲ್ದಾಣದ ಯೋಜನೆ ಯಾವ ಹಂತದಲ್ಲಿದೆ;

ಆ) ನಿಲ್ದಾಣವನ್ನು ಕಟ್ಟಲು ಎಷ್ಟು ಕಾಲಾವಕಾಶ ಬೇಕಾಗಿದೆ;

ಇ) ಈ ನಿಲ್ದಾಣವನ್ನು ಕಟ್ಟಲು ಸರ್ಕಾರ ಎಷ್ಟು ಹಣ ಮೀಸಲಿಟ್ಟಿದೆ (ವಿವರ ನೀಡುವುದು);

ಈ) ನಿಲ್ದಾಣವನ್ನು ಕಟ್ಟಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸ್ಥಳವನ್ನು ಪಡೆಯಲಾಗಿದೆಯೇ?

ಶ್ರೀ ಆರ್.ಅಶೋಕ (ಸಾರಿಗೆ ಸಚಿವರು) :

ಅ) ಆ) ಇ) ಮತ್ತು ಈ)

ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಮಲಾನಗರದ ಶಂಕರ್‌ನಾಗ್ ಬಸ್ ನಿಲ್ದಾಣ ನಿರ್ಮಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ನಿವೇಶನವನ್ನು ನೀಡಿರುವುದಿಲ್ಲ.

ಬೆಂಗಳೂರು ನಗರ ಸಾರಿಗೆ ಬಗ್ಗೆ

434 (934) ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಕಳೆದ 3 ವರ್ಷಗಳಿಂದ ಖರೀದಿಸಿದ ಬಸ್‌ಗಳೆಷ್ಟು? ಅವುಗಳಿಗೆ ವೆಚ್ಚ ಮಾಡಿರುವ ಹಣವೆಷ್ಟು? (ವಿವರವಾದ ಮಾಹಿತಿ, ವರ್ಷವಾರು ನೀಡುವುದು);

ಆ) ಬಸ್‌ಗಳು ಅನುಪಯುಕ್ತ ಎಂದು ಕಂಡುಬಂದಲ್ಲಿ ಅದನ್ನು ವಿಲೇವಾರಿ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಮತ್ತು ಅದರಿಂದ ಬರತಕ್ಕ ಆದಾಯವೆಷ್ಟು? (ವಿವರ ನೀಡುವುದು)

ಇ) ಕೇಂದ್ರ ಸರ್ಕಾರದ ನರ್ಮ್ ಯೋಜನೆಯಲ್ಲಿ ಎಷ್ಟು ಬಸ್‌ಗಳನ್ನು ಖರೀದಿಸಿದೆ, ಅವುಗಳಲ್ಲಿ ಸಾಮಾನ್ಯ ದರ್ಜೆ, ಸುವರ್ಣ, ಪುಷ್ಪಕ್, ಏರ್‌ಸಸ್ಪೆನ್ಷನ್ ಬಸ್‌ಗಳು ಮತ್ತು ವಜ್ರ ವೋಲ್ವೋ ಬಸ್‌ಗಳು ಎಷ್ಟು? ಅದಕ್ಕೆ ವೆಚ್ಚ ಮಾಡಿರುವ ಹಣವೆಷ್ಟು?

ಈ) ಸರ್ಕಾರಕ್ಕೆ ಪ್ರತಿ ವರ್ಷ ಬರುತ್ತಿರುವ ಆದಾಯ ಮತ್ತು ಖರ್ಚು ಎಷ್ಟು; (ವಿವರವಾದ ಮಾಹಿತಿ ನೀಡುವುದು)?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) :

ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ಖರೀದಿಸಿರುವ ಒಟ್ಟು ಬಸ್‌ಗಳು ಮತ್ತು ಮೊತ್ತವನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ವರ್ಷ	ಖರೀದಿಸಿದ ಬಸ್‌ಗಳು	ವೆಚ್ಚ ಮಾಡಿದ ಮೊತ್ತ (ಕೋಟಿ ರೂ.ಗಳಲ್ಲಿ)
2006–07	794	121.46
2007–08	623	80.77
2008–09	949	298.33

ಆ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಹಳೆಯ ಬಸ್‌ಗಳನ್ನು ಅನುಪಯುಕ್ತವೆಂದು ಕಂಡುಬಂದಲ್ಲಿ ಅದನ್ನು ವಿಲೇವಾರಿ ಮಾಡಿದ್ದು ಆದಾಯದ ವಿವರಗಳು ಕೆಳಕಂಡಂತಿವೆ:

ವರ್ಷ	ಆದಾಯ (ಲಕ್ಷ ರೂ.ಗಳಲ್ಲಿ)
2006–07	129.40
2007–08	420.11
2008–09	383.18

ಇ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಕೇಂದ್ರ ಸರ್ಕಾರದ ನರ್ಮ್ ಯೋಜನೆಯಲ್ಲಿ ಖರೀದಿಸಿರುವ ಒಟ್ಟು ವಾಹನಗಳ ಸಂಖ್ಯೆ ಮತ್ತು ವೆಚ್ಚ ಮಾಡಿರುವ ಮೊತ್ತದ ವಿವರಗಳನ್ನು ಈ ಕೆಳಕಂಡ ಪಟ್ಟಿಯಲ್ಲಿ ವಿವರಿಸಲಾಗಿದೆ.

ವಾಹನಗಳ ಮಾದರಿ	ಖರೀದಿಸಿದ ಬಸ್‌ಗಳು	ವೆಚ್ಚ ಮಾಡಿದ ಮೊತ್ತ (ಕೋಟಿ ರೂ.ಗಳಲ್ಲಿ)
ಸುವರ್ಣ	612	134.66
ಮಾರ್ಕೊಪೋಲೋ	98	30.37
ವೋಲ್ವೋ	140	109.22

ಈ) ಪ್ರತಿ ವರ್ಷ ಅನೇಕ ಮೂಲಗಳಿಂದ ಬರುತ್ತಿರುವ ಆದಾಯ ಮತ್ತು ಖರ್ಚು ಮಾಡಿರುವ ವಿವರಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

(ಕೋಟಿ ರೂ.ಗಳಲ್ಲಿ)

ವರ್ಷ	ಆದಾಯ	ಖರ್ಚು
2006–07	887.59	663.27
2007–08	939.81	799.58
2008–09	1000.63	945.45

ರಾಜ್ಯದಲ್ಲಿ ಎಷ್ಟು ಕೆ.ಎಸ್.ಆರ್.ಟಿ.ಸಿ. ಡಿಪೋಗಳ ಬಗ್ಗೆ

435 (935) ಶ್ರೀ ನೆ.ಲ.ನರೇಂದ್ರ ಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕೆ.ಎಸ್.ಆರ್.ಟಿ.ಸಿ. ಡಿಪೋಗಳಿವೆ; ಡಿಪೋಗಳಲ್ಲಿ ಕಳಪೆ ಮಟ್ಟದ ಟೈರ್ ಮತ್ತು ಬಿಡಿ ಭಾಗಗಳನ್ನು ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೆ.ಎಸ್.ಆರ್.ಟಿ.ಸಿ.ಯಲ್ಲಿ ಯಾವ ಯಾವ ದರ್ಜೆಯ ಬಸ್‌ಗಳು ಇವೆ. (ವಿವರವಾದ ಮಾಹಿತಿಯನ್ನು ನೀಡಲು ಕೋರಿದೆ);